**ಪತ್ರಿಕಾ ಪ್ರಕಟಣೆ**

ವಿಜಯಪುರ
ದಿನಾಂಕ: 18.05.2021.

**1] ಗಾಂಧಿಚೌಕ ಪೊಲೀಸ ಠಾಣೆ ಗುನ್ನಾ. ನಂ: 96/2021 ಕಲಂ 188, 269, ಐಪಿಸಿ ಮತ್ತು 87 ಕೆ.ಪಿ ಆಕ್ಟ್**

ದಿನಾಂಕ: 17/05/2021 ರಂದು 16.00 ಗಂಟೆಗೆ ಇದರಲ್ಲಿ ಆರೋಪಿತರಾದ 1) )ಹಾಜಿ ಮಲ್ಲಾಂಗ ತಂದೆ ಗುಲಾಮಶಾ ಮಕಾಂದಾರ, 2) ಜಹಾಂಗೀರ ತಂದೆ ಅಬ್ದುಲ್ ಸಾಬ ಮುಜಾವರ, 3) ದಸ್ತಗೀರಸಾಬ ತಂದೆ ಹುಸೇನಸಾಬ ಭಾಗವಾನ, ಆರೊಪಿತರು ಈಗ ಕೊರೊನಾ ವೈರಸ್/ ಕೋವಿಡ್-19 ಸಾಂಕ್ರಾಮಿಕ ವಾಗಿ ಹರಡದಂತೆ ತಡೆಗಟ್ಟುವ ಮತ್ತು ಅಪಾಯಕಾರಿ ಸಾಂಕ್ರಾಮಿಕ ರೋಗ ವನ್ನು ತಡೆಗಟ್ಟುವ ನಿಟ್ಟಿನಲ್ಲಿ ಮತ್ತು ಸಾರ್ವಜನಿಕರ ಹಿತದೃಷ್ಟಿಯನ್ನು ಕಾಯ್ದುಕೊಳ್ಳಲು ಮುಂಜಾಗೃತ ಕ್ರಮವಾಗಿ ಕರ್ನಾಟಕ ಸರ್ಕಾರ ನಿಷೇಧದ ಆದೇಶ ಹೊರಡಿಸಿದ್ದರೂ ಸಹ ತಿಳಿದೂ ತಿಳಿದೂ ವಿಜಯಪುರ ಶಹರದ ನವಭಾಗದಿಂದ ಜಮಖಂಡಿ ರಸ್ತೆ ಸೇರುವ ಜಂಕ್ಷನ್ ಸಾರ್ವಜನಿಕ ರಸ್ತೆ ಪಕ್ಕದಲ್ಲಿ ಮರೆಯಲ್ಲಿ ಕೂತು ಇಸ್ಪೇಟ ಎಲೆಗಳ ಸಹಾಯದಿಂದ ತಮ್ಮ ತಮ್ಮ ಪಾಯಿದೆಗೊಸ್ಕರ ಪಣಕ್ಕೆ ಹಣ ಹಚ್ಚಿ ಅಂದರ ಬಾಹರ ಅಂಬುವ ಇಸ್ಪೇಟ್ ಮನ್ನಾ ಜೂಜಾಟ ಆಡುವಾಗ ಸಿಕ್ಕ ಅಪರಾಧ.,ಈ ಬಗ್ಗೆ ಶ್ರೀ. ಶ್ರೀ.ಶರಣಗೌದ ಬಿ ಗೌಡರ ಪಿ.ಎಸ್.ಐ [ಕಾ ಸೂ] ಗಾಂಧಿಚೌಕ ಪೊಲೀಸ್ ಠಾಣೆ. ರವರು ಫಿರ್ಯಾದಿ ಕೊಟ್ಟಿದ್ದರ ಮೇರೆಗೆ ದಿನಾಂಕ 17.05.2021 ರಂದು ಗಾಂಧಿಚೌಕ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ವಿಜಯಪುರ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 125/2021 ಕಲಂ 188,269 ಐಪಿಸಿ 15(ಎ) ಮತ್ತು 32 [3] ಕರ್ನಾಟಕ ಅಬಕಾರಿ ಕಾಯ್ದೆ 1965.**

ದಿನಾಂಕ: 17-05-2021 ರಂದು 13:15 ಗಂಟೆಗೆ ಇದರಲ್ಲಿ ಆರೋಪಿತರಾದ ಸುನೀಲ ತಂದೆ ಧನಸಿಂಗ ಪವಾರ ವಯಾ 21 ವರ್ಷ ಸಾ॥ ಕುಮಟಗಿತಾಂಡಾ ತಾ॥ ಜಿ॥ ವಿಜಯಪೂರ ಈತನು ಈಗ ಕೋರೋನಾ ವೈರಸ್ ಕೋವಿಡ್ 19 2ನೇ ಅಲೇ ಸಾಂಕ್ರಾಮಿಕವಾಗಿ ಹರಡುತ್ತಿದ್ದರಿಂದ ಮಾನ್ಯ ಕರ್ನಾಟಕ ಸರ್ಕಾರ ಹಾಗೂ ಜಿಲ್ಲಾ ದಂಡಾಧಿಕಾರಿಗಳು ವಿಜಯಪೂರ ಜಿಲ್ಲೇ ರವರು ಜನಸಂಧಣಿ ಮಾಡದಂತೆ ಮುನ್ನಚ್ಚರಿಕೆ ಕ್ರಮವಾಗಿ ನಿಷೇಧಾಜ್ಞೇ ಲಾಕಡೌನ ಆದೇಶ ಮಾಡಿದ್ದು ಸದರಿ ಆದೇಶವನ್ನು ಉಲ್ಲಂಘಿಸಿ ತನ್ನ ಪಾಯ್ದೇದೆಗೊಸ್ಕರ ಕುಮಟಗಿ ತಾಂಡಾದಲ್ಲಿ ಸೇವಾಲಾಲ ಗುಡಿಯ ಬಾಜು ಇರುವ ತನ್ನ ಚಹಾ ಅಂಗಡಿಯಲ್ಲಿ ತನ್ನ ಪಾಯ್ದೇಗೋಸ್ಕರ ಸಂಬಂದಿಸಿದ ಇಲಾಖೆಯಿಂದಾ ಅನುಮತಿಯನ್ನು ಪಡೆಯದೇ ಸಾರ್ವಜನಿಕರಿಗೆ ಮದ್ಯ ಸೇವನೆ ಮಾಡಲು ಅನುಮತಿ ನೀಡಿ ಸಿಕ್ಕಿ ಬಿದ್ದಿದ್ದು ಕಾರಣ ಸದರಿಯವನ ಮೇಲೆ ಕಲಂ: 188,269 ಐಪಿಸಿ, ಮತ್ತು 15(ಎ) ಮತ್ತು 32 [3] ಕರ್ನಾಟಕ ಅಬಕಾರಿ ಕಾಯ್ದೆ 1965 ಪ್ರಕಾರ ಪಿ.ಎಸ್.ಐ ರವರು ಸರಕಾರಿ ತರ್ಪೆ ಫಿರ್ಯಾದಿ ಕೊಟ್ಟಿದ್ದು ಇರುತ್ತದೆ.180 ಎಮ್ ಎಲ್‌ದ 2 ಖಾಲಿ ಟೆಟ್ರಾ ಪಾಕೀತಗಳು ಅಕಿ:00 2 ಖಾಲಿ ಪ್ಲಾಸ್ಟೀಕ ಗ್ಲಾಸಗಳು ಅಕಿ:00, ಈ ಬಗ್ಗೆ ಆನಂದ. ವ್ಹಿ.ಠಕ್ಕಣ್ಣವರ ಪಿ.ಎಸ್.ಐ ವಿಜಯಪುರ ರೂರಲ್ ಪಿ.ಎಸ್. ರವರು ವರದಿ ಕೊಟ್ಟ ಮೇರೆಗೆ, ದಿನಾಂಕ: 17.05.2021 ರಂದು ವಿಜಯಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಮಹಿಳಾ ಪೊಲೀಸ ಠಾಣೆ ಗುನ್ನಾ. ನಂ: 51/2021 ಕಲಂ 498(ಎ) ಸಹಿತ 34 ಐಪಿಸಿ ಮತ್ತು 3, 4 ಡಿ.ಪಿ ಆಕ್ಟ್ – 1961.**

**ದಿನಾಂಕ** 03-12-2020 ರಂದು 08-00 ಗಂಟೆಯಿಂದ ದಿನಾಂಕ : 03-01-2021 ರಂದು 08-00 ಗಂಟೆಗೆ ಇದರಲ್ಲಿ ಆರೋಪಿತರಾದ ಆರೋಪಿತರಾದ ಪಿರ್ಯಾದಿಯ ಗಂಡ 1) ಚನ್ನಬಸಪ್ಪ ತಂ॥ ಭದ್ರಪ್ಪ ಅಂಗಡಿ @ ಪಾಟೀಲ, ವಯಾ: 51 ವರ್ಷ, ಹಾಗೂ ಪಿರ್ಯಾದಿಯ ಗಂಡನ ಮೊದಲನೇಯ ಹೆಂಡತಿ ಮಕ್ಕಳಾದ 2) ಕಿಶೋರ @ ವಿರೇಶ ತಂ॥ ಚನ್ನಬಸಪ್ಪ ಅಂಗಡಿ @ ಪಾಟೀಲ, ವಯಾ: 29 ವರ್ಷ, 3) ವಿಣಾಶ್ರೀ ತಂ॥ ಚನ್ನಬಸಪ್ಪ ಅಂಗಡಿ @ ಪಾಟೀಲ ವಯಾ: 23 ವರ್ಷ,ಸಾ॥ ಎಲ್ಲರೂ ನರಬೆಂಚಿ ಕೊಳೂರ ತಾ॥ ಮುದ್ದೆಬಿಹಾಳ ಹಾಲಿ ವಸ್ತಿ : ಗಣೇಶ ನಗರ, ವಿಜಯಮರ ಇವರೆಲ್ಲರೂ ಕೂಡಿ ಪಿರ್ಯಾದಿದಾರಳಿಗೆ ನೀನು ನೋಡಲು ಚೆಂದಾಗಿಲ್ಲ ನೀನು ಗಂಡನಿಗೆ ತಕ್ಕ ಹೆಂಡತಿ ಅಲ್ಲ, ನಿನಗೆ ಅಡುಗೆ ಹಾಗೂ ಹೊಲಮನೆ ಕೆಲಸ ಗೊತ್ತಿಲ್ಲ ಹೊಸ ಕಾರು ತೆಗೆದುಕೊಳ್ಳುತ್ತಿದ್ದು ನೀನು ನಿನ್ನ ತವರು ಮನೆಯಿಂದ 2 ಲಕ್ಷ ರೂಪಾಯಿ ಹಣ ಹಾಗೂ 2 ತೊಲೆ ಬಂಗಾರವನ್ನು ತೆಗೆದುಕೊಂಡು ಬಾ ಅಂತಾ ಒಂದಿಲ್ಲ ಒಂದು ಕಾರಣವೊಡ್ಡಿ ಪಿರ್ಯಾದಿದಾರರಳಿಗೆ ಒಂದು ತಿಂಗಳಿನಿಂದ ಮಾನಸಿಕ ದೈಹಿಕ ಹಾಗೂ ವರದಕ್ಷಿಣೆ ಕಿರುಕುಳ ನೀಡಿದ ಅಪರಾಧ.. ಈ ಬಗ್ಗೆ ಪವಿತ್ರಾ @ ಸಂಗಮ್ಮ ಗಂ॥ ಚನ್ನಬಸಪ್ಪ ಅಂಗಡಿ @ ಪಾಟೀಲ, ವಯಾ: 38 ವರ್ಷ, ಸಾ॥ ನರಬೆಂಚಿ, ಕೋಳುರ ತಾ॥ ಮುದ್ದೆಬಿಹಾಳ ಹಾಲಿ ವಸ್ತಿ : ಗಣೇಶ ನಗರ, ವಿಜಯಪುರ ರವರು ವರದಿ ಕೊಟ್ಟ ಮೇರೆಗೆ, ದಿನಾಂಕ: 17.05.2021 ರಂದು ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**4] ಮುದ್ದೇಬಿಹಾಳ ಪೊಲೀಸ ಠಾಣೆ ಗುನ್ನಾ. ನಂ: 85/2021 ಕಲಂ 15[ಎ], 32[3] ಕರ್ನಾಟಕ ಅಬಕಾರಿ ಕಾಯ್ದೆ–1965 & 188, 269 ಐ.ಪಿ.ಸಿ.**

**ದಿನಾಂಕ:** 17–05–2021 ರಂದು 15–30 ಅವರ್ಸಕ್ಕೆ, ಇದರಲ್ಲಿ ಆರೋಪಿತರಾದ ಮೌನೇಶ ತಂದೆ: ಶರಣಪ್ಪ ಹಟ್ಟಿ ವಯಾ–26 ವರ್ಷ, ಜಾತಿ–ಹಿಂದೂ ಕುರುಬರ, ಉದ್ಯೋಗ– ಕಿರಾಣಿ ಅಂಗಡಿಯಲ್ಲಿ ಕೆಲಸ ಸಾ: ಬಳಬಟ್ಟಿ 2] ಸಂತೋಷ ತಂದೆ. ಬಸವರಾಜ ಮಾಳಗೊಂಡ ವಯಾ–30 ವರ್ಷ, ಜಾತಿ–ಹಿಂದು ಕುರುಬರ, ಉದ್ಯೋಗ– ವ್ಯಾಪಾರ ಸಾ: ಬಳಬಟ್ಟಿ, ಸದರಿ ಆರೋಪಿರನು ಕೋರೋನಾ ಸಾಂಕ್ರಾಮಿಕ ರೋಗ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ ಅಂತಾ ಗೊತ್ತಿದ್ದರೂ ಕೂಡಾ ಉಲ್ಲಂಘನೆ ಮಾಡಿದ್ದಲ್ಲದೇ, ಬಳಬಟ್ಟಿ ಗ್ರಾಮದ ಸಂಗೊಳ್ಳಿ ರಾಯಣ್ಣ ಸರ್ಕಲ್ ಹತ್ತಿರ ಇರುವ ತಮ್ಮ ಕಿರಾಣಿ ಅಂಗಡಿಯಲ್ಲಿ ತಮ್ಮ ಸ್ವಂತ ಪಾಯಿದೆಗೊಸ್ಕರ ಸಂಬಂಧಿಸಿದ ಪ್ರಾಧಿಕಾರದಿಂದ ಯಾವುದೇ ಲೈಸೆನ್ಸ ವ ಪರವಾನಿಗೆಯನ್ನು ಪಡೆಯದೆ ಸಾರ್ವಜನಿಕರಿಗೆ ಮದ್ಯ ಸೇವನೆ ಮಾಡಲು ಗ್ಲಾಸು, ನೀರು ಹಾಗೂ ತಿನಿಸು ಕೊಟ್ಟು ಸರಾಯಿ ಕುಡಿಯಲು ಸ್ಥಳಾವಕಾಶ ಮಾಡಿಕೊಟ್ಟಾಗ ಸಿಕ್ಕಿದ್ದು, ಸದರಿಯವರ ಮೇಲೆ ಕಲಂ: 15 [ಎ] ಮತ್ತು 32 [3] ಕರ್ನಾಟಕ ಅಬಕಾರಿ ಕಾಯ್ದೇ– 1965 ಹಾಗೂ 188, 269 ಐ.ಪಿ.ಸಿ ಪ್ರಕಾರ ಪ್ರಕಾರ ನಮ್ಮದ ಸರಕಾರಿ ತರ್ಫೆ ಫಿರ್ಯಾದಿ ಇರುತ್ತದೆ. ಇದರಲ್ಲಿ ಜಪ್ತಾದ ಮುದ್ದೇಮಾಲು ಮೂಲ ಪಂಚನಾಮೆ ಪಿರ್ಯಾದಿಯೊಂದಿಗೆ ಆರೋಪಿತರನ್ನು ತಮ್ಮ ಕಡೆಗೆ ಹಾಜರುಪಡಿಸಿದ್ದು ಇರುತ್ತದೆ. ಮುಂದಿನ ಕ್ರಮ ಕೈಕೊಳ್ಳಲು ತಿಳಿಸಲಾಗಿದೆ ಅಂತಾ ವಗೈರೆ ಪಿರ್ಯಾದಿಯ ಪಿರ್ಯಾದದಲ್ಲಿ ನಮೂದು ಅದೆ. ಜಪ್ತಾದ ಮಾಲು: 1] 180 ಎಮ್. ಎಲ್ ದ 8 ಕಜ ಘಖಇಥಿ ಹೆಸರಿನ ಟೆಟ್ರಾ ಪಾಕೀಟಗಳು ಅರ್ಧ ಬಳಸಿದ್ದವು 04. ಕಿ: 00–00.2] ಪ್ಲಾಸ್ಟಿಕ ಗ್ಲಾಸಗಳು 4 ಉಪಯೋಗಿಸಿದ್ದು ಕಿ 00=00.3] ಎರಡು ಲೀಟರದ ನೀರಿನ ಬಾಟಲಿ ಒಂದು ಕಿ:00=00.